ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು	:	**ಶ್ರೀ ಗೋವಿಂದ ರಾಜು**
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**088**
ಉತ್ತರಿಸಬೇಕಾದ ದಿನಾಂಕ	:	**15.02.2022**
ಉತ್ತರಿಸಬೇಕಾದ ಸಚಿವರು	:	**ಸಹಕಾರ ಸಚಿವರು**

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಹಕಾರ ಪತ್ತಿನ ಸಂಘಗಳನ್ನು ಪ್ರಾರಂಭಿಸಲು ಇರುವ ಮಾನದಂಡವೇನು;</td><td>ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 3, 3ಎ, 3ಬಿ ನಲ್ಲಿ ಸ್ಪಷ್ಟಪಡಿಸಲಾಗಿದೆ. ಪ್ರಾರಂಭಿಕ ಷೇರು ಬಂಡವಾಳ ಹಾಗೂ ಸದಸ್ಯರ ಸೇರ್ಪಡೆ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಸಂಖ್ಯೆ ಆರ್‌ಎಸ್‌ಆರ್/231/ ಎಕ್ಸ್‌ಎಂಸಿ/2008-09 ದಿನಾಂಕ 17-05-2008 ರಲ್ಲಿ ನಿಗದಿಪಡಿಸಲಾಗಿದೆ. (ಅನುಬಂಧ-1). ಸದರಿ ಸುತ್ತೋಲೆ ಪ್ರಕಾರ ಸಂಗ್ರಹಿಸಬೇಕಾದ ಷೇರು ಹಣ ಹಾಗೂ ಸದಸ್ಯತ್ವ ಸೇರ್ಪಡೆ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಸಹಕಾರಿಯ ಕಾರ್ಯವ್ಯಾಪ್ತಿಯ ಜನ ಸಂಖ್ಯೆ</th><th>ಕನಿಷ್ಟ ಸದಸ್ಯರು</th><th>ಪ್ರಾರಂಭಿಕವಾಗಿ ಷೇರು ಧನ ಸಂಗ್ರಹಿಸಬೇಕಾದ ಮೊತ್ತ</th></tr>
<tr><td>1</td><td>2 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ</td><td>200</td><td>ರೂ. 4.00 ಲಕ್ಷ</td></tr>
<tr><td>2</td><td>2 ಲಕ್ಷದ ಮೇಲ್ಪಟ್ಟು, 5 ಲಕ್ಷದವರೆಗೆ</td><td>300</td><td>ರೂ.6.00 ಲಕ್ಷ</td></tr>
<tr><td>3</td><td>5.00 ಲಕ್ಷದ ಮೇಲ್ಪಟ್ಟು, 10 ಲಕ್ಷದವರೆಗೆ</td><td>500</td><td>ರೂ.10.00 ಲಕ್ಷ</td></tr>
<tr><td>4</td><td>10.00 ಲಕ್ಷದ ಮೇಲ್ಪಟ್ಟು 20 ಲಕ್ಷದವರೆಗೆ</td><td>750</td><td>ರೂ.15.00 ಲಕ್ಷ</td></tr>
<tr><td>5</td><td>20 ಲಕ್ಷಕ್ಕೆ ಮೇಲ್ಪಟ್ಟು</td><td>1000</td><td>ರೂ.20.00 ಲಕ್ಷ</td></tr>
</table>
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ನಿಬಂಧಕರ ಸುತ್ತೋಲೆ ಸಂಖ್ಯೆ ಸಿಆರ್‌ಡಿ/ಕೆಎಂಸಿ-04/179/2016-17, ದಿನಾಂಕ:12-05-2017</td></tr>
</table>

		(ಅನುಬಂಧ-2) ಮತ್ತು ಸುತ್ತೋಲೆ ಸಂಖ್ಯೆ: ಆರ್‌ಸಿಎಸ್/ಸಿಆರ್‌ಡಿ/ಸಿಎಬಿ-2/30/2020-21, ದಿನಾಂಕ:24-06-2020 (ಅನುಬಂಧ-3) ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡಲು ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. • ಪ್ರತಿ ಸಂಘವು ಕನಿಷ್ಟ 4000 ಎಕರೆ ಸಾಗುವಳಿ ಭೂಮಿಯನ್ನು ಹೊಂದಿರಬೇಕು. • ಸಂಘದ ಕಾರ್ಯಕ್ಷೇತ್ರವು ಕೇಂದ್ರಸ್ಥಾನದಿಂದ ಕನಿಷ್ಟ 05 ಕಿ.ಮೀ ಪರಿದಿಯನ್ನು ಹೊಂದಿರಬೇಕು. • ಕನಿಷ್ಟ 600 ರೈತ ಕುಟುಂಬವನ್ನು ಹೊಂದಿರುವ ಗ್ರಾಮಗಳಾಗಿರಬೇಕು. • ಒಂದು ಗ್ರಾಮವನ್ನು ಒಂದೇ ಸಂಘದ ವ್ಯಾಪ್ತಿಗೆ ಬರುವಂತೆ ನೋಡಿಕೊಳ್ಳತಕ್ಕದ್ದು. • ಒಂದು ಗ್ರಾಮ ಪಂಚಾಯ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡಬೇಕಾದ ಪ್ರಸ್ತಾವೆಗಳು ಬಂದರೆ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆಯುವುದು. • ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಸಮಾಪನೆಗೊಂಡಿದ್ದು, ನೋಂದಣಿ ರದ್ದುಗೊಂಡಿದ್ದಲ್ಲಿ ಮಾತ್ರ ಅಂತಹ ಸಂಘದ ವ್ಯಾಪ್ತಿಯಲ್ಲಿ ಹೊಸ ಸಂಘವನ್ನು ನೋಂದಣಿ ಮಾಡಿ ಕಾರ್ಯನಿರ್ವಹಿಸುವಂತೆ ಕ್ರಮ ಜರುಗಿಸತಕ್ಕದ್ದು.
ಆ)	ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯನ್ವಯ ಸಹಕಾರ ಸಂಸ್ಥೆ ಸ್ಥಾಪಿಸಲು ಇಂತಿಷ್ಟು ಹಣವನ್ನು ಠೇವಣಿ ರೂಪದಲ್ಲಿಡಲು, ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ;	ಸಹಕಾರ ಬ್ಯಾಂಕ್‌ಗಳು ಮಾತ್ರ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯನ್ವಯ ಷೇರು ಹಣ ಸಂಗ್ರಹಿಸಬೇಕಾಗಿರುತ್ತದೆ. ಸಹಕಾರ ಸಂಘಗಳು ಭಾರತೀಯ ರಿಸರ್ವ್ ಬ್ಯಾಂಕಿನ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ಸಹಕಾರ ಸಂಘಗಳನ್ನು ಸ್ಥಾಪಿಸುವ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಯಾವುದೇ ಮಾರ್ಗಸೂಚಿ ಹೊರಡಿಸಿರುವುದಿಲ್ಲ.
ಇ)	ಎಲ್ಲಾ ಪತ್ತಿನ ಸಹಕಾರ ಸಂಘಗಳ ಆರ್ಥಿಕ ವ್ಯವಹಾರವನ್ನು ನೋಡಲು ಏಕೀಕೃತ ತಂತ್ರಾಂಶ ಅಳವಡಿಸಲು ಸರ್ಕಾರದ ಆಲೋಚನೆ	ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿಯಲ್ಲಿ ನೋಂದಣಿಯಾದ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಆಡಳಿತ ವ್ಯವಸ್ಥೆ ಮತ್ತು ಆರ್ಥಿಕ ವ್ಯವಹಾರವನ್ನು ನಿರ್ವಹಿಸಲು ಆಯಾ ಸಹಕಾರ ಸಂಘಗಳ ಆಡಳಿತ ಮಂಡಳಿಯೇ ಸಕ್ಷಮವಾಗಿದೆ. ಕೃಷಿಯೇತರ ಪತ್ತಿನ ಸಹಕಾರ ಸಂಘ / ಪಟ್ಟಣ ಸಹಕಾರ ಬ್ಯಾಂಕುಗಳ ಏಕೀಕೃತ ತಂತ್ರಾಂಶವನ್ನು ಅಳವಡಿಸುವ ಆಲೋಚನೆಯು

	ಮಾಡಿದೆಯೇ;	ಸರ್ಕಾರದ ಮುಂದೆ ಇರುವುದಿಲ್ಲ. ಆದರೆ ಕೇಂದ್ರ ಸರ್ಕಾರವು ರಾಷ್ಟ್ರಾದ್ಯಂತವಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣಗೊಳಿಸಲು ಹಾಗೂ ಏಕೀಕೃತ ತಂತ್ರಾಂಶವನ್ನು ಅಳವಡಿಸಲು ಯೋಜನೆಯನ್ನು ರೂಪಿಸಿರುತ್ತದೆ. ಈ ಯೋಜನೆಯನ್ವಯ ಕ್ರಮ ಕೈಗೊಳ್ಳಲಾಗುತ್ತದೆ.

ಕಡತ ಸಂಖ್ಯೆ : ಸಿಒ 22 ಪಿಎಂಸಿ 2022

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು

ಸಹಕಾರ ಸಂಘಗಳ ನಿಬಂಧಕರ ಕಚೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.

ಸಂಖ್ಯೆ: ಆರ್‌ಎಸ್‌ಆರ್/23//ಎಕ್ಸ್‌ಎಂಸಿ/2008-09. ದಿನಾಂಕ: 17 -5-2008.

ಸುತ್ತೋಲೆ

ವಿಷಯ:- ಪಟ್ಟಣ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರ ಸಂ.ಸಿಒ/02/ಸಿಹೆಚ್‌ಎಸ್/2008, ದಿ: 9-1-2008.

--

ರಾಜ್ಯದಲ್ಲಿ ಪಟ್ಟಣ ಸಹಕಾರಿ ಪತ್ತಿನ ಸಂಘಗಳನ್ನು ನೋಂದಣಿ ಮಾಡುವಾಗ ಏಕರೂಪದ ಬೈಲಾಗಳನ್ನು ಅನುಸರಿಸುವುದು ಸೂಕ್ತವೆಂಬ ತೀರ್ಮಾನಕ್ಕೆ ಬರಲಾಗಿದೆ. ಕೆಲವೊಂದು ಪಟ್ಟಣ ಸಹಕಾರಿ ಪತ್ತಿನ ಸಂಘಗಳು ತಮ್ಮ ಸಂಘದ ಉದ್ದೇಶಗಳಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿನ ಪರವಾನಗಿ ಪಡೆದಿರುವ ಪಟ್ಟಣ ಬ್ಯಾಂಕುಗಳು ಮಾಡುತ್ತಿರುವ ವ್ಯವಹಾರಗಳನ್ನು ನಿರ್ಬಂಧಿಸುವುದನ್ನು ಅವಶ್ಯಕವೆಂದು ಪರಿಗಣಿಸಲಾಗಿದೆ.

ಸಹಕಾರ ಕಾಯ್ದೆಯಲ್ಲಿ ಶಾಸನಬದ್ಧವಾಗಿ ಸಹಕಾರ ಸಂಘಗಳು ಅನುಸರಿಸಬೇಕಾದ ನಿಯಮಾವಳಿಗಳನ್ನು ಉಪನಿಯಮಗಳಲ್ಲಿ ಒಟ್ಟಾರೆಯಾಗಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಮಾದರಿ ಉಪನಿಯಮಗಳನ್ನು ರಚಿಸಲಾಗಿರುತ್ತದೆ.

ರಾಜ್ಯದಲ್ಲಿನ ಸಹಕಾರ ಇಲಾಖೆಯ ವಿವಿಧ ಮಟ್ಟದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸಂಘಗಳನ್ನು ನೋಂದಣಿ ಮಾಡುವಾಗ ಮಾದರಿ ಉಪನಿಯಮಗಳಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಘಗಳ ಉಪನಿಯಮಗಳನ್ನು ನೋಂದಣಿ ಮಾಡಲು ಹಾಗೂ ಉಪನಿಯಮಗಳ ತಿದ್ದುಪಡಿ ಮಾಡಲು ಈ ಮೂಲಕ ತಿಳಿಸಲಾಗಿದೆ.

ಪಟ್ಟಣ ಸಹಕಾರಿ ಪತ್ತಿನ ಸಂಘಗಳ ಕಾರ್ಯವ್ಯಾಪ್ತಿಗಳು ಸಾಧ್ಯವಾದಷ್ಟು ಮಟ್ಟಿಗೆ ಆಯಾ ಪಟ್ಟಣದ ಕೆಲವು ಆಯ್ದ ಪಟ್ಟಣ/ನಗರಗಳ ಆಯ್ದ ಭಾಗಗಳಿಗೆ ಮಾತ್ರ ಸೀಮಿತಗೊಳಿಸಿದಲ್ಲಿ ಸಂಘದ ಸದಸ್ಯರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವುದಲ್ಲದೆ, ಸಂಘಗಳ ವ್ಯವಹಾರವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಅನುಕೂಲವಾಗುವುದು ಹಾಗೂ ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಸಹಕಾರಿ ಸಂಘಗಳಲ್ಲಿ ಸದಸ್ಯರಾಗುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಪಟ್ಟಣ ಸಹಕಾರಿ ಪತ್ತಿನ ಸಂಘಗಳ ನೋಂದಣಿ ಮಾಡುವಾಗ ಇಲಾಖಾಧಿಕಾರಿಗಳು ಈ ಕೆಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

1. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 4 ರನ್ವಯ ಸಹಕಾರ ಸಂಘಗಳನ್ನು ಸದರಿ ಅಧಿನಿಯಮದಡಿ ಸೂಚಿಸಿರುವ ಷರತ್ತುಗೊಳಪಟ್ಟು ನಿಯಮಾನುಸಾರ ಆರ್ಥಿಕ ಸದೃಢತೆಯಿಂದ (economically viable) ನಡೆಯುವ ಸಾಧ್ಯತೆಯಿದೆ ಎಂಬುದನ್ನು ಹಾಗೂ ಹಾಗೆ

ಮಾಡುವುದರಿಂದ ಹಾಲಿ ಇರುವ ಸಹಕಾರ ಸಂಘಗಳ ಬೆಳವಣಿಗೆಗೆ ಯಾವುದೇ ಬಾಧಕ ಉಂಟಾಗುವುದಿಲ್ಲ ಎಂಬುದನ್ನು ಖಾತರಿಪಡಿಸಕೊಳ್ಳತಕ್ಕದ್ದು.

2. ಪಟ್ಟಣ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಪೂರ್ವದಲ್ಲಿ ಷೇರು ಸಂಗ್ರಹಿಸಲು ಅನುಮತಿ ನೀಡುವ ಮೊದಲು ಸ್ಥಳೀಯ ಜನಸಂಖ್ಯೆ, ಹಾಲಿ ಇರುವ ಇಂತಹ ಸಂಘಗಳ ವಹಿವಾಟು, ಇವುಗಳನ್ನು ಪರಿಶೀಲಿಸಿದ ನಂತರ ಉದ್ದೇಶಿತ ಸಂಘವು ಆರ್ಥಿಕವಾಗಿ ಸಬಲತೆ ಹೊಂದುವುದೇ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

3. ಈ ತರಹದ ಸಂಘಗಳ ಉಪನಿಯಮಗಳನ್ನು ನೋಂದಾಯಿಸುವಾಗ ಸದಸ್ಯೇತರರಿಂದ (ಸದಸ್ಯರಲ್ಲದವರಿಂದ) ಠೇವಣಿ ಸಂಗ್ರಹಿಸುವುದನ್ನು/ವ್ಯವಹರಿಸುವುದನ್ನು ನಿರ್ಬಂಧಿಸತಕ್ಕದ್ದು.

4. ಸಂಘಗಳ ಹೆಸರಿನಲ್ಲಾಗಲೀ/ಉದ್ದೇಶಗಳಲ್ಲಾಗಲೀ ಬ್ಯಾಂಕ್, ಬ್ಯಾಂಕರ್, ಬ್ಯಾಂಕಿಂಗ್ ಇತ್ಯಾದಿ ಶಬ್ದಗಳನ್ನು ಉಪಯೋಗಿಸತಕ್ಕದ್ದಲ್ಲ.

5. ಪಟ್ಟಣ ಸಹಕಾರಿ ಪತ್ತಿನ ಸಂಘಗಳ ಕಾರ್ಯವ್ಯಾಪ್ತಿಯನ್ನು ಆಯಾ ಪಟ್ಟಣ ಅಥವಾ ನಗರ ಪ್ರದೇಶದ ಕೆಲವು ಆಯ್ದ ಭಾಗಗಳಿಗೆ ಮಾತ್ರ ಸೀಮಿತಗೊಳಿಸತಕ್ಕದ್ದು.

6. ಪಟ್ಟಣ ಸಹಕಾರಿ ಪತ್ತಿನ ಸಂಘಗಳ ಉದ್ದೇಶಗಳನ್ನು ಬ್ಯಾಂಕಿಂಗ್ ಚಟುವಟಿಕೆಗಳಾದ ಚೆಕ್ ಉಪಯೋಗ, ಹುಂಡಿಗಳ ಹಾಗೂ ಚೆಕ್ಕುಗಳ ಸೋಡಿ ಇಂತಹ ಚಟುವಟಿಕೆಗಳನ್ನು ಸ್ಪಷ್ಟವಾಗಿ ನಿರ್ಬಂಧಿಸತಕ್ಕದ್ದು.

7. ಸಂಘಗಳಲ್ಲಿ ಒಟ್ಟು ಠೇವಣಿಯ ಕನಿಷ್ಠ 10% ನಗದು ಪರಿವರ್ತನೀಯ ಆಸ್ತಿಯನ್ನು ಹಾಗೂ ಕನಿಷ್ಟ ಶೇ.3 ರಷ್ಟು ನಗದನ್ನು ಕಾಯ್ದುಕೊಳ್ಳುವುದನ್ನು ಉಪನಿಯಮಗಳಲ್ಲಿ ಕಡ್ಡಾಯಗೊಳಿಸತಕ್ಕದ್ದು.

8. ಪಟ್ಟಣ ಪತ್ತಿನ ಸಹಕಾರ ಸಂಘಗಳು ತಮ್ಮ ಠೇವಣಿಗಳ ಮೇಲಿನ ಬಡ್ಡಿ ವೆಚ್ಚ ಹಾಗೂ ಸಾಲಗಳ ಮೇಲೆ ವಿಧಿಸುವ ಬಡ್ಡಿ ವೆಚ್ಚಕ್ಕೆ ಶೇ.3 ಕ್ಕಿಂತ ಹೆಚ್ಚಿನ ವ್ಯತ್ಯಾಸವಿಲ್ಲದಂತೆ ಅಂತರವನ್ನು ಕಾಯ್ದುಕೊಳ್ಳುವುದು.

9. ಸಂಘದಲ್ಲಿರುವ ಸದಸ್ಯರ ಒಟ್ಟು ಸದಸ್ಯರ ಸಂಖ್ಯೆಯ ಶೇ.20 ಕ್ಕೆ ಮೀರದಂತೆ ಸಹ ಸದಸ್ಯರನ್ನು ಸೇರಿಸಿಕೊಳ್ಳಲು ನಿರ್ಬಂಧವಿರತಕ್ಕದ್ದು.

10. ಪಟ್ಟಣ ಪತ್ತಿನ ಸಹಕಾರ ಸಂಘಗಳಲ್ಲಿ ನಾಮಮಾತ್ರ ಸದಸ್ಯರಿಗೆ ಯಾವುದೇ ಸಾಲ ನೀಡದಂತೆ ನಿರ್ಬಂಧಿಸತಕ್ಕದ್ದು ಹಾಗೂ ನಾಮಮಾತ್ರ ಸದಸ್ಯರನ್ನು ಕೇವಲ ಜಾಮೀನು ನೀಡಿಕೆಗೆ ಹಾಗೂ ಸಹಕಾರ ಸಂಘಗಳ ಕಾಯ್ದೆಯ ಕಲಂ 70 ರ ವ್ಯಾಪ್ತಿಗೆ ಒಳಪಡಿಸುವ ಉದ್ದೇಶಗಳಿಗೆ ಮಾತ್ರ ಸೇರಿಸಿಕೊಳ್ಳತಕ್ಕದ್ದು.

11. ಪಟ್ಟಣ ಪತ್ತಿನ ಸಹಕಾರ ಸಂಘಗಳ ನೋಂದಣಿ ಆದರೆ ಮಾಡುವಾಗ ಆರ್ಥಿಕ ಸಬಲತೆಯನ್ನು ಖಚಿತಪಡಿಸಿಕೊಳ್ಳಲು ಸಂಗ್ರಹಿಸಬೇಕಾದ ಕನಿಷ್ಟ ಷೇರು ಹಣದ ಮಿತಿಯನ್ನು ಈ ಕೆಳಗಿನಂತೆ ಪುನ: ಪರಿಷ್ಕರಿಸಲಾಗಿದೆ.

ಕ್ರ. ಸಂ.	ಸಹಕಾರಿಯ ಕಾರ್ಯ ವ್ಯಾಪ್ತಿಯ ಜನಸಂಖ್ಯೆ	ಕನಿಷ್ಟ ಸದಸ್ಯರು	ಪ್ರಾರಂಭಿಕವಾಗಿ ಷೇರು ಧನ ಸಂಗ್ರಹಿಸಬೇಕಾದ ಮೊತ್ತ.
1	2 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ	200	ರೂ.4.00 ಲಕ್ಷ
2	2 ಲಕ್ಷದ ಮೇಲ್ಪಟ್ಟು, 5 ಲಕ್ಷದವರೆಗೆ	300	ರೂ.6.00 ಲಕ್ಷ
3	5.00 ಲಕ್ಷದ ಮೇಲ್ಪಟ್ಟು, 10 ಲಕ್ಷದವರೆಗೆ	500	ರೂ.10.00 ಲಕ್ಷ
4	10.00 ಲಕ್ಷದ ಮೇಲ್ಪಟ್ಟು 20 ಲಕ್ಷದವರೆಗೆ	750	ರೂ.15.00 ಲಕ್ಷ
5	20 ಲಕ್ಷಕ್ಕೆ ಮೇಲ್ಪಟ್ಟು	1000	ರೂ.20.00 ಲಕ್ಷ

ಮಹಿಳೆಯರು, ಪ.ಜಾ./ಪ.ಪಂಗಡ/ಮತ್ತು ಅಲ್ಪ ಸಂಖ್ಯಾತರರು ಸೂಚಿಸುವ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ಮೇಲೆ 11 ರಲ್ಲಿ ನಮೂದಿಸಿರುವ ಸದಸ್ಯರ ಹಾಗೂ ಸಂಗ್ರಹಿಸಬೇಕಾದ ಷೇರು ಹಣದ ಶೇಕಡಾ 50 ರಷ್ಟು ಗುರಿ ನಿಗಧಿಪಡಿಸತಕ್ಕದ್ದು.

ಈ ಪರಿಷ್ಕರಣೆ ಹೊರತುಪಡಿಸಿ ಉಲ್ಲೇಖದ ಸುತ್ತೋಲೆಗಳ ಪ್ರಕಾರ ಇನ್ನುಳಿದ ಮಾರ್ಗಸೂಚಿಗಳು ಜಾರಿಯಲ್ಲಿರುತ್ತವೆ.

12. ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ಸಹಕಾರ ಸಂಘಗಳ ಅಧಿನಿಯಮ ಪ್ರಕರಣ 7 ರನ್ವಯ ನೋಂದಣಿ ಮಾಡುವ ಅಧಿಕಾರ ಹೊಂದಿದ ಸಕ್ಷಮ ಪ್ರಾಧಿಕಾರ ಅಂದರೆ ಉಪ ವಿಭಾಗೀಯ ಸಹಾಯಕ ನಿಬಂಧಕರು/ಜಿಲ್ಲಾ ಉಪನಿಬಂಧಕರು/ಪ್ರಾಂತೀಯ ಜಂಟಿ ನಿಬಂಧಕರು ಹಾಗೂ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ ರವರು ಈ ಮಾರ್ಗಸೂಚಿಗಳನ್ನು ಅನುಸರಿಸಿದ ನಂತರವೇ ನೋಂದಾಯಿಸತಕ್ಕದ್ದು. ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಯಾವುದೇ ಪತ್ತಿನ ಸಹಕಾರ ಸಂಘ ನೋಂದಾಯಿಸಿದಲ್ಲಿ ಆಯಾ ಅಧಿಕಾರಿಗಳು ಜವಾಬ್ದಾರರಾಗುತ್ತಾರೆ.

13. ಪೋಟ ನಿಯಮಗಳು ಸ್ಪಷ್ಟವಾದ ಅರ್ಥವನ್ನು ಕೊಡುತ್ತಿರಬೇಕು. ಠೇವಣಿ ಹಾಗೂ ನಿಧಿಗಳನ್ನು ಇತರೆ ಮೂಲಗಳಿಂದ, ಇತರರಿಂದಾ ಹಾಗೂ ಸದಸ್ಯೇತರರಿಂದಾ ಎಂಬ ಶಬ್ದಗಳು ಪೋಟ ನಿಯಮಗಳಲ್ಲಿರಬಾರದು.

14. ಇತರೆ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವವರು ನೋಂದಣಿ ಮಾಡುವ ಪತ್ತಿನ ಸಂಘದ ಸದಸ್ಯತ್ವಕ್ಕೆ ಅರ್ಹರಲ್ಲವೆಂಬುದನ್ನು ಉಪನಿಯಮಗಳಲ್ಲಿ ಅಳವಡಿಸಿರಬೇಕು.

15. ವ್ಯಕ್ತಿಗಳು ಮಾತ್ರ ಸಂಘದ ಸದಸ್ಯತ್ವಕ್ಕೆ ಅರ್ಹರು, ಯಾವುದೇ ಸಂಸ್ಥೆ, ನೋಂದಣಿಯಾದ ಇತರೆ ಸಂಘಗಳು, ಅಸೋಸಿಯೇಷನ್‌ಗಳು ಸಂಘದ ಸದಸ್ಯತ್ವಕ್ಕೆ ಅರ್ಹರಲ್ಲಾ.

16. ಈ ಸುತ್ತೋಲೆಯೊಂದಿಗೆ ಅನುಮೋದಿತವಾದ ಮಾದರಿ ಉಪನಿಯಮಗಳನ್ನು ಅನುಸರಿಸಿಕೊಂಡು ರಚಿಸಲಾದ ಸಂಘಗಳ ಉಪನಿಯಮಗಳನ್ನು ನೊಂದಾಯಿಸಲು ಕ್ರಮವಿಡತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

17/5

ಗೆ,

1. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
2. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ.
3. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ.
4. ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ- ಸೂಕ್ತ ಕ್ರಮಕ್ಕಾಗಿ.

<u>ಪ್ರತಿಯನ್ನು:-</u>

1. ಗೌರವಪೂರ್ವಕವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಂ.132, 1ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು-27.
4. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ನಂ.1718, 9ನೇ ಮುಖ್ಯರಸ್ತೆ, 3ನೇ ಬಡಾವಣೆ, ಜಯನಗರ, ಬೆಂಗಳೂರು-560 011.
5. ಆಯುಕ್ತರು, ಕೈಮಗ್ಗ ಮತ್ತು ಜವಳಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6. ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರು, ಕ್ರೆಸೆಂಟ್ ರಸ್ತೆ, ಬೆಂಗಳೂರು.
7. ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ನಂ.32, ಜಯನಿವಾಸ, ಶಂಕರಮಠ ರಸ್ತೆ, ಬೆಂಗಳೂರು.

ಯ:
17/5

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಚೇರಿ, ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ:ಸಿಆರ್‌ಡಿ/ಕೆಎಡಿಎಸ್-4/179/2016-17 ದಿನಾಂಕ: 12-05-2017

'ಸುತ್ತೋಲೆ'

ವಿಷಯ :- 2017-18 ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಗ್ರಾಮಪಂಚಾಯತಿಗೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸುವ ಬಗ್ಗೆ

ಉಲ್ಲೇಖ:- 1. ಮಾನ್ಯ ಮುಖ್ಯ ಮಂತ್ರಿಗಳ 2017-18 ನೇ ಸಾಲಿನ ಆಯವಯ ಭಾಷಣ ದಿ.15-3-2017

=====

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1 ರ ಮಾನ್ಯ ಮುಖ್ಯ ಮಂತ್ರಿಗಳ 2017-18 ನೇ ಸಾಲಿನ ಆಯವ್ಯಯ ಬಾಷಣದ ಕಂಡಿಕೆ 71 ರಲ್ಲಿ 'ಆರ್ಥಿಕವಾಗಿ ಕಾರ್ಯಸಾಧುವೆನಿಸುವ ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಘೋಷಿಸಲಾಗಿದೆ.

ದಿ.31-3-2017 ರ ಅಂತ್ಯಕ್ಕೆ ರಾಜ್ಯದಲ್ಲಿ ಹೊಸದಾಗಿ ರಚನೆಯಾದ 393 ಗ್ರಾಮ ಪಂಚಾಯತಿಯನ್ನು ಒಳಗೊಂಡಂತೆ ಒಟ್ಟಾರೆಯಾಗಿ 6022 ಗ್ರಾಮ ಪಂಚಾಯತಿಗಳು ಇರುತ್ತವೆ. ಆದರೆ 5463 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ಸಹಕಾರ ಇಲಾಖೆಯಲ್ಲಿ ನೊಂದಣಿಯಾಗಿದ್ದು, ಈ ಪೈಕಿ 5230 ಸಂಘಗಳು ಕಾರ್ಯನಿರತವಾಗಿವೆ. ಇದರಲ್ಲಿ ಕೆಲವು ಗ್ರಾಮ ಪಂಚಾಯತಿಗಳಿಗೆ ಎರಡು ಅಥವಾ ಹೆಚ್ಚಿನ ಪ್ಯಾಕ್ಸ್‌ಗಳೂ ಸಹ ಇರುವುದರಿಂದ ಸುಮಾರು 800 ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ಯಾಕ್ಸ್‌ಗಳು ಇರುವುದಿಲ್ಲ.

ನಬಾರ್ಡ್ ಮತ್ತು ಈ ಕಚೇರಿಯ ಸುತ್ತೋಲೆಯಲ್ಲಿ ಕನಿಷ್ಠ 8 ಕಿ.ಮೀ ಪರೀದಿಗೆ ಕಡಿಮೆ ಇರದಂತೆ, ಕನಿಷ್ಟ 600 ಕುಟುಂಬಗಳಿಗೆ, ಕನಿಷ್ಟ 5000 ಎಕರೆಗೆ ಕೃಷಿ ಭೂಮಿ ಹೊಂದಿರುವ, ಕನಿಷ್ಟ 20 ಲಕ್ಷ ಸಾಲ ನೀಡಲು ಶಕ್ತವಾಗಿರುವ ಪ್ರದೇಶಗಳಲ್ಲಿ ಹೊಸ ಪ್ಯಾಕ್ಸ್‌ನ್ನು ರಚಿಸಬಹುದಾಗಿದೆ ಎಂದು ತಿಳಿಸಲಾಗಿದೆ.

ಅಂದಾಜು 6000 ಜನ ಸಂಖ್ಯೆ ಇರುವ ಗ್ರಾಮಗಳಿಗೆ ಒಂದರಂತೆ ಗ್ರಾಮ ಪಂಚಾಯತಿಗಳು ಇದ್ದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯ ವ್ಯಾಪ್ತಿಯು ರಾಜ್ಯದಲ್ಲಿರುವ ಎಲ್ಲಾ ಹಳ್ಳಿಗಳಿಗೂ ವ್ಯಾಪಿಸಿದ್ದರೂ, ಪ್ರಸ್ತುತ ಗ್ರಾಮಗಳಲ್ಲಿ ಜನ ಸಂಖ್ಯೆ ಹೆಚ್ಚುತ್ತಿದ್ದು, ಕುಟುಂಬ ವಿಭಜನೆಯಿಂದ ಭೂ ಹಿಡುವಳಿಗಳು ಕಡಿಮೆಯಾಗುತ್ತಿದ್ದು ಭೂ ಮಾಲೀಕರು ಮತ್ತು ಕುಟುಂಬಗಳು ಹೆಚ್ಚಾಗುತ್ತಿರುವುದರಿಂದ, ರೈತರಿಗೆ ಮನೆ ಬಾಗಿಲಿನಲ್ಲಿ ಬ್ಯಾಂಕಿಂಗ್ ಸೌಲಭ್ಯ ಮತ್ತು ಕೃಷಿ ಪರಿಕರಗಳ ಸೌಲಭ್ಯ ಕಲ್ಪಿಸಲು ಪ್ರತೀ ಗ್ರಾಮ ಪಂಚಾಯತಿಗೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸುವುದು ಅವಶ್ಯಕವಿರುತ್ತದೆ. ಈ ನಿಟ್ಟಿನಲ್ಲಿ ಹೊಸ ಸಂಘ ರಚಿಸುವ ಮಾನದಂಡಗಳಿಗೂ ವಿನಾಯಿತಿ ನೀಡುವ ಅವಶ್ಯಕತೆ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ 2017-18 ನೇ ಸಾಲಿನಲ್ಲಿ ಆರ್ಥಿಕವಾಗಿ ಸಬಲತೆಯಾಗುವ ಗ್ರಾಮ ಪಂಚಾಯತಿ ವಾಪ್ತಿಯಲ್ಲಿ ಹೊಸ ಪ್ಯಾಕ್ಸ್ ಗಳನ್ನು ರಚಿಸುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ.

1. ಇಲಾಖೆಯಿಂದ ನೇಮಿಸಿದ ಸಂಬಂಧಿಸಿದ ಡಿಸಿಸಿ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅಥವಾ ಸಹಕಾರ ಸಂಘಗಳ ಉಪ ನಿಬಂಧಕರು – ಅಧ್ಯಕ್ಷರು
2. ಸಹಕಾರ ಸಂಘಗಳ ಉಪ ನಿಬಂಧಕರು ಅಥವಾ ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು –ಸದಸ್ಯರು
3. ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು –ಸದಸ್ಯರು.
4. ಸಂಬಂಧಿಸಿದ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿರುವ ಉಪ ವಿಭಾಗದ ಸಹಾಯಕ ನಿಬಂಧಕರುಗಳು-ಸದಸ್ಯ ಕಾರ್ಯದರ್ಶಿ.

ಮೇಲಿನ ಸಮಿತಿಯು ಈ ಕೆಳಕಂಡ ಅಂಶಗಳನ್ವಯ ಆರ್ಥಿಕವಾಗಿ ಸಬಲತೆಯಾಗುವ ಪ್ರತೀ ಗ್ರಾಮ ಪಂಚಾಯತಿಯಲ್ಲಿ ಪ್ಯಾಕ್ಸ್ ಗಳನ್ನು ರಚಿಸುವಂತೆ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

1. ಮೇಲಿನ ಸಮಿತಿಯು ಇದಕ್ಕೆ ಲಗತ್ತಿಸಿದ ಅನುಬಂಧ-1 ರಲ್ಲಿ ಪ್ಯಾಕ್ಸ್‌ಗಳ ಕಾರ್ಯವ್ಯಾಪ್ತಿಯಲ್ಲಿನ ಗ್ರಾಮಗಳ ವಿವರ ಮತ್ತು ಸದಸ್ಯರ ವಿವರ, ಗ್ರಾಮ ಪಂಚಾಯತಿಯ ಕಾರ್ಯ ವ್ಯಾಪ್ತಿ ಮತ್ತು ಭೂಹಿಡುವಳಿ ಹಾಗೂ ಜನ ಸಂಖ್ಯೆ ಮತ್ತು ಸಾಲಗಾರರ ವಿವರ ಹಾಗೂ ಅನುಬಂಧ- 2 ರಲ್ಲಿ ಹಾಲಿ ಇರುವ ಸಂಘದ ಆರ್ಥಿಕ ಪರಿಸ್ಥಿತಿ ಮತ್ತು ಮೂಲಭೂತ ಸೌಕರ್ಯಗಳ ಮಾಹಿತಿಗಳನ್ನು ದಿ.15-6-2017 ರೊಳಗೆ ಸಂಬಂಧಿಸಿದ ಸಹಕಾರ ಅಬಿವೃದ್ಧಿ ಅಧಿಕಾರಿಯಿಂದ ಪಡೆಯತಕ್ಕದ್ದು. ಸಂಬಂಧಿಸಿದ ಉಪ ನಿಬಂಧಕರು ಸದರಿ ಮಾಹಿತಿಯನ್ನು ಕ್ರೂಢೀಕರಿಸಿ ನಿಬಂಧಕರ ಕಛೇರಿಗೆ ಸಲ್ಲಿಸತಕ್ಕದ್ದು.

2. ಪ್ರತೀ ಗ್ರಾಮ ಪಂಚಾಯತಿಗೆ ಒಂದರಂತೆ ಒಂದು ಹೊಸ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಇರುವಂತೆ ಜಿಲ್ಲಾ ಮಟ್ಟದ ಸಮಿತಿಯು ಟಿಪ್ಪಣಿಯನ್ನು ತಯಾರಿಸತಕ್ಕದ್ದು. ಈ ರೀತಿ ಹೊಸ ಸಂಘವನ್ನು ರಚಿಸುವಾಗ ಪ್ರತೀ ಸಂಘವು ಕನಿಷ್ಠ 4000 ಎಕರೆ ಸಾಗುವಳಿ ಭೂಮಿಯನ್ನು ಹೊಂದಿರುವ, ಕನಿಷ್ಠ 5 ಕಿ.ಮೀ ಪರಿದಿಯನ್ನು ಹೊಂದಿರುವ, ಕನಿಷ್ಠ 600 ಕುಟುಂಬಗಳನ್ನು ಹೊಂದಿರುವ ಗ್ರಾಮಗಳನ್ನು ಒಳಗೊಂಡಿರುವಂತೆ ನೋಡಕೊಳ್ಳತಕ್ಕದ್ದು. ಮೂರೂ ಮಾನದಂಡಗಳನ್ನು ಅರ್ಹತೆ ಹೊಂದಿರತಕ್ಕದ್ದು.

3. ಎರಡು ಅಥವಾ ಹೆಚ್ಚಿನ ಗ್ರಾಮ ಪಂಚಾಯತಿಗಳ ವ್ಯಾಪ್ತಿಯನ್ನು ಹೊಂದಿರುವ ಹಾಲಿ ಇರುವ ಪ್ಯಾಕ್ಸ್‌ನ್ನು ವಿಭಜನೆ ಮಾಡಿದರೆ ಹಾಲಿ ಇರುವ ಸಂಘ ಮತ್ತು ಹೊಸದಾಗಿ ರಚಿಸಬಹುದಾದ ಸಂಘದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರ, ಸಂಘದ ಕಚೇರಿ ಇರಬೇಕಾದ ಗ್ರಾಮದ ವಿವರ, ಅದಕ್ಕೆ ಸಂಬಂಧಿಸಿದ ಮೂಲ ಭೂತ ಸೌಕರ್ಯಗಳ ವಿವರ ಮುಂತಾದ ವಿವರಗಳ ಟಿಪ್ಪಣಿಯನ್ನು ತಯಾರಿಸಿ ಸಮಿತಿಯಿಂದ ಅನುಮೋದನೆ ಪಡೆದು ದಿ. 15-7-2017 ರೊಳಗೆ ಸದಸ್ಯ ಕಾರ್ಯದರ್ಶಿಯವರು ಸಂಬಂಧಿಸಿದ ಹಾಲಿ ಸಂಘಕ್ಕೆ ನೀಡತಕ್ಕದ್ದು.

4. ಹಾಲಿ ಇರುವ ಸಂಘವನ್ನು ವಿಭಜನೆ ಮಾಡಿ ಹೊಸ ಸಂಘವನ್ನು ರಚಿಸುವಾಗ ಮತ್ತೊಂದು ಸಂಘದ ಗ್ರಾಮಗಳನ್ನು ಹೊಸ ಸಂಘಕ್ಕೆ ಸೇರ್ಪಡೆ ಮಾಡಬಹುದಾಗಿದೆ. ಆದರೆ ಸದರಿ ಸಂಘವು ಮೇಲಿನ ಕನಿಷ್ಠ ಮಾನದಂಡಗಳನ್ನು ಹೊಂದಿರುವಂತೆ ನೋಡಿಕೊಳ್ಳತಕ್ಕದ್ದು. ಒಂದು ಗ್ರಾಮವನ್ನು ಒಂದೇ ಸಂಘದ ವ್ಯಾಪ್ತಿಗೆ ಬರುವಂತೆ ನೋಡಿಕೊಳ್ಳತಕ್ಕದ್ದು, ಯಾವುದೇ ಎರಡು ಸಂಘಗಳು ಒಂದೇ ಗ್ರಾಮವನ್ನು ಹೊಂದಿರತಕ್ಕದ್ದಲ್ಲ.(ತಾಲ್ಲೂಕು ಮಟ್ಟದ ಕೆಲವು ವಿಶೇಷ ಪ್ರಕರಣದ ಸಂಘಗಳನ್ನು ಹೊರತುಪಡಿಸಿ)

5. ಹಾಲಿ ಇರುವ ಸಂಘವು ದಿ.30-9-2017 ರೊಳಗೆ ನಡೆಯುವ ಸರ್ವ ಸದಸ್ಯರ ಸಭೆಯಲ್ಲಿ ಸಂಘವನ್ನು ವಿಭಜಿಸುವ ಬಗ್ಗೆ ಅಥವಾ ಹಾಲಿ ಸಂಘದ ಶಾಖೆಯನ್ನು ತೆರೆಯುವ ಬಗ್ಗೆ ಸಮಿತಿಯು ನೀಡಿದ ಟಿಪ್ಪಣಿಯನ್ನು ನಿರ್ಣಯಕ್ಕೆ ಮಂಡಿಸತಕ್ಕದ್ದು.

6. ಸರ್ವ ಸದಸ್ಯರ ಸಭೆಯಲ್ಲಿ ಸಮಿತಿ ನೀಡುವ ಟಿಪ್ಪಣಿಯನ್ವಯ ಅಥವಾ ಕೆಲವು ಮಾರ್ಪಾಡುಗಳೊಂದಿಗೆ ಹಾಲಿ ಇರುವ ಸಂಘವನ್ನು ವಿಭಜನೆ ಮಾಡಲು ಅಥವಾ ಶಾಖೆಯನ್ನು ತೆರೆಯಲು ಒಪ್ಪಿದಲ್ಲಿ ಸಂಘದ ಕಾರ್ಯದರ್ಶಿಯು ಸಮಿತಿಗೆ ಸಂಘವನ್ನು ವಿಭಜಿಸಿ ಹೊಸ ಸಂಘವನ್ನು ರಚಿಸಲು ಪ್ರಸ್ತಾವನೆ ಸಲ್ಲಿಸತಕ್ಕದ್ದು.

7. ಸಮಿತಿಯು ಸಂಘವು ಸಲ್ಲಿಸಿದ ಪ್ರಸ್ತಾವನೆಯನ್ನು ಮತ್ತೊಮ್ಮೆ ಪರಿಶೀಲಿಸಿ ಹಾಲಿ ಸಂಘದ ಕಾರ್ಯದರ್ಶಿ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಹೊಸ ಸಂಘವನ್ನು ಸ್ಥಾಪಿಸಲು ಆದೇಶ ನೀಡತಕ್ಕದ್ದು.

8. ಸಂಬಂಧಿಸಿದ ಹಾಲಿ ಸಂಘದ ಕಾರ್ಯದರ್ಶಿ ಮತ್ತು ಸಂಬಂಧಿಸಿದ ಅಧಿಕಾರಿಗಳು ನಿಯಮಾನುಸಾರ ಸಂಘವನ್ನು ವಿಭಜನೆ ಮಾಡಿ ಹೊಸ ಸಂಘವನ್ನು ರಚಿಸಲು ಕ್ರಮವಿಟ್ಟು ದಿ.31-

01-2018 ರೊಳಗೆ ಹೊಸ ಸಂಘವನ್ನು ನೊಂದಣಿ ಮಾಡಲು ಕ್ರಮ ವಹಿಸತಕ್ಕದ್ದು. ವಿಶೇಷ ಸಂಧರ್ಭಗಳಲ್ಲಿ ಅಂತಿಮ ಗಡುವನ್ನು ವಿಸ್ತರಿಸಬಹುದಾಗಿದೆ.

9. ಹೊಸದಾಗಿ ರಚನೆಯಾದ ಸಂಘವು ತನ್ನ ದಿನನಿತ್ಯದ ಖರ್ಚುಗಳನ್ನು ಸರಿದೂಗಿಸಿ ಪ್ರತೀ ತಿಂಗಳಿಗೆ ಕನಿಷ್ಟ ರೂ.10000 ಗಳ ಆದಾಯ ಗಳಿಸುವ ವರೆಗೆ ಹಾಲಿ ಇರುವ ಅಥವಾ ಇತರೆ ಸಂಘದ ಕಾರ್ಯದರ್ಶಿಯನ್ನು ಅಥವಾ ನುರಿತ ಸಿಬ್ಬಂದಿಗಳನ್ನು ಪ್ರಭಾರ ಕಾರ್ಯದರ್ಶಿಯಾಗಿ ನೇಮಕ ಮಾಡತಕ್ಕದ್ದು.

10. ಹೊಸ ಸಂಘವನ್ನು ಸ್ಥಾಪಿಸಲು ಸರ್ಕಾರದಿಂದ ಯಾವುದೇ ಅನುದಾನವನ್ನು ನೀಡಲಾಗುವುದಿಲ್ಲ.

11. ಸಮಿತಿ ಸದಸ್ಯ ಕಾರ್ಯದರ್ಶಿಯವರು ಪ್ರತೀ ತಿಂಗಳು ಈ ಬಗ್ಗೆ ಪ್ರಗತಿ ವರದಿಯನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.

12. ಈಗಾಗಲೇ ಹಾಲಿ ಇರುವ ಸಂಘಗಳನ್ನು ವಿಭಜಿಸಿ ಹೊಸ ಸಂಘಗಳನ್ನು ಸ್ಥಾಪಿಸಲು ಬೇಡಿಕೆ ಇದ್ದರೆ, ಸಂಬಂಧಿಸಿದ ಅಧಿಕಾರಿಗಳು ಸಮಿತಿಗೆ ವರದಿ ನೀಡಿ ಆಧ್ಯತೆ ಮೇಲೆ ಹೊಸ ಸಂಘವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳತಕ್ಕದ್ದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪಾಲಿಸಿ 2017-18 ನೇ ಸಾಲಿನಲ್ಲಿ ಕಾರ್ಯಸಾಧುವೆಸುವ ಪ್ರತೀ ಗ್ರಾಮ ಪಂಚಾಯತಿಗೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ರಚಿಸಲು ಎಲ್ಲಾ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ಆದೇಶಿಸಲಾಗಿದೆ.

(ಎಂ.ಕೆ.ಅಯ್ಯಪ್ಪ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಗೆ,

1. ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
2. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು,
3. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ನೀಡಲಾಗಿದೆ.

1. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ.,
2. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.

ಪ್ರತಿಯನ್ನು

1. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಅನುಬಂಧ-1

details of pacs business in each village of its area of operation (No in actual and amount in lakhs.) (as on 31-3-2017)(in english only)

Sl no	Name of the pacs	location of the village where pacs office is located	Name of the villages covered	village code number	Name of the gram panchayat the each village comes under	distance of village from head office in km	No of families in each village	Population each village	cultivable land in acre in each village	Out of which irrigated land are in acre	total members in the pacs in each village	Borrowing members in the pacs in each village	amount barrowed(o/s) in each village	out of which barrowing members for agricultural purposes in each village	amount barrowed for agriculture purpose in each village (o/s)	No of depositors in each village	deposit amount in each village(o/s)
1	2	3	4	5	6	7	8	9	10	11	12	13	14	15	16	17	18

ಅನುಬಂಧ-2

details of pacs viability as on 31-3-2017(No in actual and amount in lakhs.)(in English only)

Sl No	Name of the pacs	radius of area of operation in km	no. Of employees	working capital	Loan outstanding	agri loan o/s	No n agri loan o/s	deposit o/s	non credit business done during 2016-17	accumulated loss	profit	total land owned in sq feet	out of which land in other village	vacant area in sq ft	total Building area owned in sq ft	out of which area for gowdown purpose	out of which area for agri business purpose	out of which area for pds purpose
1	2	3	4	5	6	7	8	9	10	11	12	13	14	15	16	17	18	19

ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ, ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು – 52

ಸಂಖ್ಯೆ: ಆರ್‌ಸಿಎಸ್/ಸಿಆರ್‌ಡಿ/ಸ್ವಎಬಿ-2/30/2020-21 ದಿನಾಂಕ: 24-06-2020

:: ಸುತ್ತೋಲೆ ::

ವಿಷಯ:- ರಾಜ್ಯದಲ್ಲಿ ಗ್ರಾಮ ಪಂಚಾಯ್ತಿಗೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸುವ ಕುರಿತು ಸ್ಪಷ್ಟೀಕರಣ.

ಉಲ್ಲೇಖ:- (1) ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಸಂಖ್ಯೆ: ಸಿಆರ್‌ಡಿ/ಕೆಎಂಸಿ-4 179/ 2020, ದಿನಾಂಕ 12-05-2017.

##

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸುತ್ತೋಲೆಯಲ್ಲಿ ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯ್ತಿಗೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ರಚಿಸುವ ಕುರಿತು ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಅಲ್ಲದೇ ನಬಾರ್ಡ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ರಚಿಸುವ ಕುರಿತು ನಿರ್ಧಿಷ್ಟವಾದ ಮಾರ್ಗಸೂಚಿಗಳನ್ನು ಸಹ ನೀಡಿರುತ್ತದೆ.

ರಾಜ್ಯದಲ್ಲಿ ಇತ್ತೀಚಿನ ವರದಿಗಳ ಪ್ರಕಾರ ಈ ಕಛೇರಿಯ ಸುತ್ತೋಲೆ ಮತ್ತು ನಬಾರ್ಡ್ ಮಾರ್ಗಸೂಚಿಗಳನ್ನು ಮೀರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡಲಾಗುತ್ತಿದೆ. ಇದರಿಂದ ಈ ಹಿಂದೆ ನೋಂದಣಿಯಾಗಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಆರ್ಥಿಕವಾಗಿ ದುರ್ಬಲಗೊಂಡು ನಿಷ್ಕ್ರಿಯ ಹಂತಕ್ಕೆ ತಲುಪಿರುತ್ತವೆ. ಮುಂದುವರೆದು, ಉಲ್ಲೇಖದ ಸುತ್ತೋಲೆಯಲ್ಲಿ ಒಂದು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿದ್ದರೂ ಸಹ ಸದರಿ ಸಮಿತಿಯು ನಿಷ್ಕ್ರಿಯಗೊಂಡು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಮೇಲ್ಕಂಡ ಹಿನ್ನೆಲೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ;

1. ಉಲ್ಲೇಖ (1)ರ ಸುತ್ತೋಲೆಯಲ್ಲಿ ರಚಿಸಿರುವ ಸಮಿತಿಯನ್ನು ರದ್ದುಗೊಳಿಸಲಾಗಿದೆ.
2. ಒಂದು ಗ್ರಾಮ ಪಂಚಾಯ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡಬೇಕಾದ ಪ್ರಸ್ತಾವನೆಗಳು ಬಂದರೆ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆಯಲು ಸೂಚಿಸಲಾಗಿದೆ
3. ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಸಮಾಪನೆಗೊಂಡಿದ್ದು, ನೋಂದಣಿ ರದ್ದುಗೊಂಡಿದ್ದಲ್ಲಿ ಮಾತ್ರ ಅಂತಹ ಸಂಘದ ವ್ಯಾಪ್ತಿಯಲ್ಲಿ ಹೊಸ ಸಂಘವನ್ನು ನೋಂದಣಿ ಮಾಡಿ ಕಾರ್ಯನಿರ್ವಹಿಸುವಂತೆ ಕ್ರಮ ಜರುಗಿಸತಕ್ಕದ್ದು.

ಈ ಸುತ್ತೋಲೆಯ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಸಂಬಂಧಿಸಿದ ನೋಂದಣಿ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ. ಈ ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿಯನ್ನು ಸಲ್ಲಿಸುವುದು.

(ಸಹಿ) 24/6/20
ಎನ್.ಎಸ್.ಪ್ರಸನ್ನಕುಮಾರ್ ಭಾ.ಆ.ಸೇ
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಗೆ,

1) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ,
2) ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ,
3) ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ